**ಸಾಕ್ಷಿಗೆ ದಿನಾಂಕಃ22-07-24 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಎದುರುದಾರರ ಪರಃ ಶ್ರೀ. ಪಿ ಕೆ ವಕೀಲರಿಂದ ಃ**

ನಾನು ಎಸ್ ಎಸ್ ಎಲ್ ಸಿ ವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಪ್ರಸ್ತುತ ಶೃಂಗೇರಿ ಪಟ್ಟಣದ ಹರಿಹರ ಬೀದಿಯಲ್ಲಿ ವಾಸವಾಗಿರುತ್ತೇನೆ. ನಾನು ಎದುರುದಾರರಿಂದ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿ 5 ವರ್ಷಗಳು ಕಳೆದಿರುತ್ತದೆ. ಕಳೆದ 5 ವರ್ಷದಿಂದ ನಾನು ಶೃಂಗೇರಿ ಪಟ್ಟಣದಲ್ಲಿಯೇ ವಾಸವಿದ್ದು, ಕೆಲಸದ ನಿಮಿತ್ತ ಇತರೆ ಜಾಗಗಳಿಗೆ ಹೋಗಿರುತ್ತೇನೆ. ಪ್ರಸ್ತುತ ನಾನು ಯಾವುದೇ ಉದ್ಯೋಗವನ್ನು ಮಾಡುತ್ತಿಲ್ಲ, ಕಾರಣ ನನ್ನ ಆರೋಗ್ಯ ಸರಿ ಇರುವುದಿಲ್ಲ.

2. ನನ್ನ ಹಾಗೂ 1 ನೇ ಎದುರುದಾರರನ ವಿವಾಹ 1998 ರಲ್ಲಿ ಆಗಿರುತ್ತದೆ. ನನ್ನ ಮದುವೆಯ ಸಮಯದಲ್ಲಿ 1 ನೇಎದುರುದಾರನ ಕುಟುಂಬ ಒಟ್ಟು ಕುಟುಂಬವಾಗಿ ಒಂದೇ ಮನೆಯಲ್ಲಿ ಕುಟುಂಬದ ಸದಸ್ಯರೆಲ್ಲರೂ ವಾಸವಿದ್ದರು ಎಂದರೆ ಸರಿ. ನಂತರದಲ್ಲಿ ಅಂದರೆ 2001 ರಲ್ಲಿ ನಾನು ಮತ್ತು 1 ನೇ ಎದುರುದಾರರು ಸದರಿ ಒಟ್ಟು ಕುಟುಂಬದಿಂದ ಹೊರಗೆ ಬಂದು, ನಾವಿಬ್ಬರೂ ನನ್ನ ತವರು ಮನೆಯಲ್ಲಿ ನೆಲಸಿದ್ದೆವು. ನನಗಾಗಲೀ ಅಥವಾ 1 ನೇ ಎದುರುದಾರರಿಗಾಗಲೀ ಆತನ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಯಾವುದೇ ಪಾಲನ್ನು ನೀಡದೆ ಹೊರಗೆ ಕಳುಹಿಸಿರುತ್ತಾರೆ. ನಾನು ಮತ್ತು 1 ನೇ ಎದುರುದಾರ ನಮ್ಮ ತವರು ಮನೆಯಲ್ಲಿಯೇ 18 ವರ್ಷಗಳ ಕಾಲ ಒಟ್ಟಿಗೇ ವಾಸ ಮಾಡಿರುತ್ತೇವೆ. ಸದರಿ 18 ವರ್ಷಗಳ ಕಾಲ 1 ನೇ ಎದುರುದಾರರು ನಾವು ಖರೀದಿಸಿದಂತಹ ಟಿಲ್ಲರ್ ಅನ್ನು ಇತರೆ ಅವರ ಕೃಷಿ ಭೂಮಿಯಲ್ಲಿ ಬಳಸಿ ದುಡಿದಿರುತ್ತಾರೆ. ಸದರಿ 18 ವರ್ಷಗಳ ಕಾಲ ನಾನು ಹಾಗೂ 1 ನೇ 1 ನೇ ಎದುರುದಾರರು ಕಷ್ಟದಿಂದ ಜೀವನ ನಡೆಸಿರುತ್ತೇವೆ ಎಂದರೆ ಸರಿ. ಸದರಿ 18 ವರ್ಷಗಳಲ್ಲಿ 1 ನೇ ಎದುರುದಾರರು ಅವರ ಆದಿ ಮನೆಗೆ ಹೋಗಿ ಬರುತ್ತಿದ್ದರು. ಆದರೆ ನಾನು ಕೆಲವೊಮ್ಮೆ ಮಾತ್ರ 1 ನೇ ಎದುರುದಾರನ ಒತ್ತಾಯದಿಂದ ಅವರ ಆದಿ ಮನೆಗೆ ಹೋಗಿರುತ್ತೇನೆ.

3. 2001 ರ ನಂತರದಲ್ಲಿ 1 ನೇ ಎದುರುದಾರರಿಗೆ ಅವರ ಕುಟುಂಬದ ಆಸ್ತಿಗಳಲ್ಲಿ ಅವರಿಗೆ ಬರಬೇಕಾದ ಪಾಲನ್ನು ನೀಡಿರುತ್ತಾರೆ. ಸದರಿ ಪಾಲು ಎಂದರೆ 3 ಎಕರೆ ಗದ್ದೆ ಮತ್ತು 1 ಎಕರೆ ತೋಟವನ್ನು ನೀಡಿರುತ್ತಾರೆ. ಶೃಂಗೇರಿ ತಾ. ನಲ್ಲಿ ಅಡಿಕೆ ತೋಟಗಳಿಗೆ ಹಳದಿ ಎಲೆ ರೋಗ ಬಂದಿರುವ ವಿಚಾರ ನನಗೆ ತಿಳಿದಿರುತ್ತದೆ. ಪ್ರಸ್ತುತದಲ್ಲಿ 1 ನೇ ಎದುರುದಾರನ ಹೆಸರಿನಲ್ಲಿರುವ ಆಸ್ತಿಗಳಿಗೂ ಸದರಿ ರೋಗವು ಆವರಿಸಿರುತ್ತದೆಯೋ ಇಲ್ಲವೋ ನಾನು ಹೋಗಿ ಪರಿಶೀಲಿಸಿರುವುದಿಲ್ಲ. ಮಲ್ನಾಡ್ ಪ್ರದೇಶದಲ್ಲಿ ಗದ್ದೆ ಜಾಗಗಳಲ್ಲಿ ವರ್ಷಕ್ಕೆ ಒಂದು ಬೆಳೆ ಮಾತ್ರ ತೆಗೆಯುವ ರೂಢಿ ಇರುತ್ತದೆ ಎಂದರೆ ಸರಿ. ಗದ್ದೆ ಜಮೀನುಗಳಲ್ಲಿ ಬೆಳೆದ ಭತ್ತದಿಂದ ಹೇಳಿಕೊಳ್ಳುವಷ್ಟು ಲಾಭಾಂಶ ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಎದುರುದಾರರ ಗದ್ದೆಯಲ್ಲಿ ಹೆಚ್ಚಾಗಿ ಮನೆಯವರೇ ಕೆಲಸ ಮಾಡುವುದರಿಂದ ಒಳ್ಳೆಯ ಲಾಭವೇ ಇರುತ್ತದೆ ಎಂದು ನುಡಿದಿರುತ್ತಾರೆ.

4. ನಾನು ಮತ್ತು 1 ನೇ ಎದುರುದಾರ ಒಟ್ಟಿಗೇ ಇದ್ದ ಸಮಯದಲ್ಲಿ ಆತನ ಹೆಸರಿನಲ್ಲಿ ಇರುವ ಭೂಮಿಗಳ ಮೇಲೆ ಸಾಲವನ್ನು ಮಾಡಿರುತ್ತೇವೆಯೇ ಅಥವಾ ಇಲ್ಲವೋ ನೆನಪಿಲ್ಲ. ನಿಪಿ-6 ರಿಂದ ನಿಪಿ-11 ಪಹಣಿಗಳಲ್ಲಿ ಸದರಿ ಆಸ್ತಿಗಳ ಮೇಲೆ ರೂ.5 ಲಕ್ಷಗಿಂತಲೂ ಅಧಿಕವಾದ ಸಾಲಗಳನ್ನು ಪಡೆದಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅಡಿಕೆ ತೋಟಕ್ಕೆ ಹಳದಿ ಎಲೆ ರೋಗ ಬಂದ ಕಾರಣದಿಂದ ಹಾಗೂ ಕುಟುಂಬದಲ್ಲಿ ಯಾವುದೇ ಆದಾಯ ಇಲ್ಲದೇ ಇದ್ದ ಕಾರಣ 1 ನೇ ಎದುರುದಾರರು ಅವರ ಹೆಸರಿನಲ್ಲಿರುವ ಆಸ್ತಿಗಳ ಮೇಲೆ ಕುಟುಂಬದ ಜೀವನ ನಿರ್ವಹಣೆಗೋಸ್ಕರ ಹಾಗೂ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಸಾಲಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ನನ್ನ ತವರು ಮನೆ ಕಿಗ್ಗ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ನನಗೆ ಇಬ್ಬರು ಸಹೋದರರು ಇರುತ್ತಾರೆ ಎಂದರೆ ಸರಿ. ಅವರು ಪ್ರಸ್ತುತದಲ್ಲಿ ಶ್ರೀಮಂತರಾಗಿರುತ್ತಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆ ಮನೆಯ ಕಡೆಯ ಕುಟುಂಬಕ್ಕೆ ಎಷ್ಟು ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದು ಗೊತ್ತಿಲ್ಲ. ನನ್ನ ತಂದೆಯ ಮನೆಯ ಕಡೆಯ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನಾನು ಈ ವರೆಗೂ ಪಾಲನ್ನು ಕೇಳಿರುವುದಿಲ್ಲ. ನನ್ನ ತಂದೆಯ ಮನೆ ಕಡೆಯಿಂದ ನನಗೆ ಯಾವುದಾದರೂ ಆಸ್ತಿಯಲ್ಲಿ ಪಾಲು ಕೊಟ್ಟಿರುತ್ತಾರೋ ಅಥವಾ ಯಾವುದಾದರೂ ಪಹಣಿಯಲ್ಲಿ ನನ್ನ ಹೆಸರು ನಮೂದು ಇರುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಎಷ್ಟು ಮನೆಗಳು ಇದ್ದವು ಎಂದು ನನಗೆ ಈಗ ನೆನಪಿಲ್ಲ. ನನ್ನ ತಂದೆಯ ಕಡೆ ಇರುವ ಒಟ್ಟು ಕುಟುಂಬದ ಆಸ್ತಿಗಳು ಈ ವರೆಗೂ ನನ್ನ ಹಾಗೂ ನನ್ನ ಸಹೋದರರ ನಡುವೆ ವಿಭಾಗ ಆಗಿರುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ.

6. ನಿಪಿ-13 ಅಂದರೆ ನಾನು ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ ದೂರಿನಲ್ಲಿ ನನಗೆ ನನ್ನ ತಂದೆ ಕಡೆಯಿಂದ ಆಸ್ತಿಗಳು ಇರುತ್ತದೆ ಎಂದು ನಮೂದಿಸಿರುತ್ತೇನೆ. ನನ್ನ ಹಿರಿಯ ಮಗಳು ಪ್ರಸ್ತುತ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಹಿರಿಯ ಮಗಳಿಗೆ ಬರುವಂತಹ ಸಂಬಳದಲ್ಲಿ ಅವರ ಜೀವನ ನಿರ್ವಹಣೆ ಹೊರತು ಪಡಿಸಿ ನನಗೂ ಸಹ ಆರ್ಥಿಕ ಸಹಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಹೋದರ ನವೀನ್ ಎನ್ನುವವರು ಶೃಂಗೇರಿಯ TAPMC ಸೊಸೈಟಿಯ ಅಧ್ಯಕ್ಷರಾಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ಮತ್ತೊಂದು ಸಹೋದರ ನೂತನ್ ಎನ್ನುವವರು ಬಿ ಜೆ ಪಿ ರಾಜಕೀಯ ಪಕ್ಷದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ನನ್ನ ಹಾಗೂ ನನ್ನ ಸಹೋದರರಿಬ್ಬರೂ ನಮ್ಮ ಒಟ್ಟು ಕುಟುಂಬದಲ್ಲಿ ಸಾಕಷ್ಟು ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರ ನೂತನ್ ರವರಿಗೆ ಆಸ್ತಿಗಳನ್ನು ಹೊರತು ಪಡಿಸಿ ಜೆಸಿಬಿ, ಲಾರಿಗಳು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ತಂದೆ ಕಡೆಯಿರುವ ಒಟ್ಟು ಕುಟುಂಬದ ಆಸ್ತಿಗಳಲ್ಲೂ ನನಗೆ ಪಾಲು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎದುರುದಾರರ ವಿರುದ್ಧ ನಾನು ಪೋಲೀಸ್ ಠಾಣೆಯಲ್ಲಿ ಹಲವಾರು ಬಾರಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ಈ ಹಿಂದೆ 1 ನೇ ಎದುರುದಾರರ ಮತ್ತೊಬ್ಬ ಸಹೋದರ ಎಂದರೆ ನಾಗೇಶ್ ಎನ್ನುವವರ ವಿರುದ್ಧ ಪೋಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ಸದರಿ ನಾಗೇಶ್ ರವರು ಈಗ ತೀರಿಕೊಂಡಿದ್ದು, ಅವರು ತೀರಿಕೊಂಡ ನಂತರದಲ್ಲಿ 1 ನೇ ಎದುರುದಾರರ ಮತ್ತೊಬ್ಬ ಸಹೋದರ ಅಂದರೆ 2 ನೇ ಎದುರುದಾರರ ವಿರುದ್ಧ ದೂರಗಳನ್ನು ನೀಡಲು ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ.

8. ಪ್ರಸ್ತುತ ಪ್ರಕರಣದಲ್ಲಿ ನನ್ನ 2 ನೇ ಮಗಳ ಪರವಾಗಿಯೂ ಸಹ 1 ನೇ ಎದುರುದಾರರಿಂದ ಜೀವನಾಂಶವನ್ನು ಕೋರಿರುತ್ತೇನೆ. ನಾನು ನನ್ನ 2 ನೇ ಮಗಳ ಹೆಸರಿನಲ್ಲಿ PLC ಪ್ರಕರಣವನ್ನು 1 ನೇ ಎದುರುದಾರನ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರರು ನನ್ನನ್ನು ಯಾವತ್ತೂ ಸಹ ಮನೆಯಿಂದ ಹೊರಗೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಯಾರಿಗೂ ತಿಳಿಸದೇ 1 ನೇ ಎದುರುದಾರರ ಮನೆಯನ್ನು ಬಿಟ್ಟು ಹೊರಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ಮನೆಯಿಂದ ಹೊರಗೆ ಹೋದ ನಂತರದಲ್ಲಿ ನಾನು ಕಾಣೆಯಾಗಿರುತ್ತೇನೆಂದು 1 ನೇ ಎದುರುದಾರ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಪೋಲೀಸರು ಸದರಿ ದೂರಿನನ್ವಯ ನನ್ನನ್ನು ಹುಡುಕಲು ಪ್ರಯತ್ನಿಸಿದ್ದರೂ ಸಿಕ್ಕಿರುವುದಿಲ್ಲ ಎಂದರೆ ನಾನು 1 ನೇ ಎದುರುದಾರನಿಂದ ಜೀವ ಭಯ ಇತ್ತು ಮತ್ತು ಸದರಿ ವಿಷಯವನ್ನು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗೆ ತಿಳಿಸಿದ್ದು, ಅವರಿಂದ ರಕ್ಷಣೆಯನ್ನು ಪಡೆದಿರುತ್ತೇನೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )

**(ದಿನಾಂಕಃ22-07-24 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**